ಎಂದುಕೊಂಡು ನೂರಾರು ಮೈಲಿ ದೂರ ಹೋದರೂ ಹಸಿವೆ ಎಂಬುದಿರುವುದರಿಂದ ನಾವು ಅದಕ್ಕೆ ಶರಣಾಗಲೇ ಬೇಕು' ಎಂದ.

ಹಣ್ಣು ತಿಂದಾದ ನಂತರ ಅಭಿ ಹೇಳಿದ, 'ಕುಟುಂಬ ಜೀವಿಯಾಗಿ, ಸಮಾಜ ಜೀವಿಯಾಗಿ ಮತ್ತು ಸ್ನೇಹಜೀವಿಯಾಗಿ ಬದುಕಬೇಕೆಂಬುದು ನಿಮ್ಮ ಅಪೇಕ್ಷೆಯಾಗಿತ್ತು. ಬದುಕಿನಲ್ಲಿ ಸಂಭವಿಸಿದ ಸಾವು ನೋವುಗಳು ಮತ್ತು ಅನಪೇಕ್ಷಿತ ತಿರುವುಗಳಿಂದಾಗಿ ಮನಸ್ಸು ಪಲ್ಲಟಗೊಂಡು ಬೇರೆ ದಾರಿ ಹಿಡಿಯಿತು. ನಿಮ್ಮಂತೆಯೇ ಕುಟುಂಬದಲ್ಲಿ, ಸಮಾಜದಲ್ಲಿ ಸ್ನೇಹಜೀವಿಯಾಗಿ ಬದುಕುಬೇಕು ಎಂಬುದು ನನ್ನ ಇಚ್ಛೆ ಕೂಡ. ಅದಕ್ಕಾಗಿ ಮದುವೆಯಾಗಿ ಒಂದು ಕುಟುಂಬವನ್ನು ಸೃಷ್ಟಿಸುವ ಬಯಕೆ ನನಗಿಲ್ಲ. ಆದ್ದರಿಂದಲೇ ನಾನು ಮದುವೆಯಾಗುವುದಿಲ್ಲ ಎಂದು ನಿರ್ಧರಿಸಿದ್ದು. ವಿವಾಹಿತನಾಗಿ ಬದುಕುವುದರಲ್ಲೇ ಸಂತೋಷ ಇರುವುದು ಎಂದು ನಾನು ತಿಳಿಯುವುದಿಲ್ಲ. ಈಗಲೇ ಇರುವ ಕುಟುಂಬದಲ್ಲೇ ಜೀವ ಇರುವವರೆಗೆ ಬದುಕಬಹುದು. ಅದು ಇಲ್ಲವೆಂದರೆ, ನಾನಿರುವ ಸಮಾಜವೇ ನನ್ನ ಕುಟುಂಬ ಎಂದು ಒಳ್ಳೆಯ ಕೆಲಸ ಮಾಡುತ್ತಾ ಸಮಾಜವನ್ನು ಪ್ರೀತಿಸುತ್ತಾ ಬದುಕಬಹುದು. ಅಪ್ಪಾ, ನಿಮಗೆ ಸುಕೃತಿ ಎಂಬ ಮಗಳಿದ್ದಾಳೆ ಅಂತ ನೆನಪಿದೆಯಲ್ಲವೆ?'

'ಇದೆ'

'ಅವಳು ಏನೇ ಮಾಡುತ್ತಿರಲಿ, ಏನೇ ಆಗಿರಲಿ, ಅವಳನ್ನು ನನ್ನ ಜೊತೆ ಇಟ್ಟುಕೊಳ್ಳಬೇಕು ಎನ್ನುವುದು ನನ್ನ ಇಚ್ಛೆ. ಅವಳ ಗುಣ ನಡತೆ ಎರಡೂ ಈಗ ಬಹಳ ವಿಲಕ್ಷಣವಾಗಿದೆ ಎನ್ನುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಸಾಧ್ಯವಾದರೆ ಅದನ್ನು ಸರಿ ಮಾಡುತ್ತೇನೆ. ಅದಕ್ಕೆ ಬೇಕಾದ ಔಷಧ ಏನು ಅಂತ ನನಗೆ ತಿಳಿದಿದೆ. ಅದು ಕೆಲಸ ಮಾಡದಿದ್ದರೆ ಅವಳು ಹೇಗಿರುವಳೋ ಹಾಗೇ ಇರಲಿ. ಆದರೂ ಅವಳನ್ನು ನಾನು ನನ್ನ ಜೊತೆ ಇಟ್ಟುಕೊಳ್ಳಬಲ್ಲೆ. ಆ ಮಕ್ಕಳನ್ನು ಉತ್ತಮ ಸಮಾಜ ಜೀವಿಗಳಾಗಿ ಬೆಳೆಸಬೇಕು ಎಂಬ ಬಯಕೆ ನನಗಿದೆ. ಅದು ಖಂಡಿತ ಸಾಧ್ಯವಾಗುತ್ತದೆ. ನೀವು ಆನೆಮಹಲಿನಲ್ಲಿ ಬಿಟ್ಟು ಬಂದಿರುವ ಮನೆ ಹೇಗೆ ಬಿಟ್ಟು ಬಂದಿದ್ದೀರೋ ಹಾಗೆಯೇ ಇರಲಿ. ಅದು ನನಗೆ ಬೇಡ. ನಿಮಗೂ ಬೇಡ. ಅದರಲ್ಲಿ ಅಮರೇಶ ಮತ್ತು ಸನ್ಮತಿ ಬದುಕಿರುವ ವರೆಗೆ ಇರಲಿ. ನಾನು ನನಗಾಗಿ ಮತ್ತು ನಮಗಾಗಿ ಒಂದು ಮನೆಯನ್ನು ಎಲ್ಲಿಯಾದರೂ ಕಟ್ಟಿಸುತ್ತೇನೆ ಅಥವಾ ಕೊಂಡುಕೊಳ್ಳುತ್ತೇನೆ. ಅದಕ್ಕೆ ಬೇಕಾದಷ್ಟು ಹಣ ನನ್ನ ಬಳಿ ಇದೆ. ಇದೆಲ್ಲ ಬೇಡ, ನಾನು ಇಲ್ಲೇ ಕಾಶಿಯಲ್ಲಿ ಸಾಯುತ್ತೇನೆ ಎಂದರೆ, ನಾನು ಕೂಡ ನಿಮ್ಮ ಜೊತೆ ಇಲ್ಲಿಯೇ ಸಂತೋಷವಾಗಿ ಸಾಯುತ್ತೇನೆ. ಆದರೆ ವಾಸ್ತವದಲ್ಲಿ, ನನಗೆ ಸಾಯುವ ಮನಸ್ಸು ಇಲ್ಲ. ನಿಮಗೆ ಹೇಗೆ ಆತ್ಮಹತ್ಯೆ ಮಾಡಿಕೊಳ್ಳುವ ಮನಸ್ಸು ಇರಲಿಲ್ಲವೊ ಹಾಗೆಯೇ ನನಗೂ ಸಾವು ಬೇಕು ಎಂದು ಬಯಸಿ ಸಾಯುವ ಮನಸ್ಸು ಇಲ್ಲ. ಅದು ಬರುವಂತೆ ಬರಲಿ. ಕಷ್ಟ ಬಂತೆಂದು ಸಾಯುವುದಿಲ್ಲ, ಸುಖ ಬಂತೆಂದು ಸಾವೇ ಇಲ್ಲ ಎಂಬಂತೆ ಬದುಕುವುದೂ ಇಲ್ಲ. ಸರಿ. ಹೊರಡಿ. ಹೊರಡಲೇ ಬೇಕು. ಸಂತೋಷದಿಂದ ಬದುಕುವ ನಿರ್ಧಾರ ಮಾಡಿ. ಬದುಕಿನಲ್ಲಿರುವ ಸಂತೋಷದ ಸುಖವನ್ನು ಅನುಭವಿಸಿದ ಬಳಿಕ ಸಾಯೋಣ' ಎಂದ ಅಭಿ. ನರಹರಿ ಸುಮ್ಮನಿದ್ದ.

ಅಭಿಯೇ ಮಾತಾಡಿದ, 'ನೀನು ಯಾವ ಪ್ರಶ್ನೆಯನ್ನೂ ಕೇಳುವುದಿಲ್ಲ ಅಂತ ನನಗೆ ಗೊತ್ತಿದೆ. ಆದ್ದರಿಂದ ನಾನೇ ಎಲ್ಲವನ್ನೂ ಹೇಳುತ್ತೇನೆ. ನನ್ನ ಗೆಳೆಯ ಮುರಾರಿಯ ಬಳಿ ಹೊಸೂರಿನಲ್ಲಿ ಎರಡು ಮನೆಗಳಾಗುತ್ತಿವೆ. ಒಂದು ನನ್ನದು, ಇನ್ನೊಂದು ಅವನದು. ಆನೆಮಹಲಿನಿಂದ ಹೊರಟ ನಂತರ ನನಗೆ ಅವನ ಸಂಪರ್ಕ ಇಲ್ಲ. ನನ್ನ ಬ್ಯಾಕ್ ಪ್ಯಾಕಿನಲ್ಲಿ ಒಂದು ಮೊಬೈಲ್ ಇದೆ. ಅದನ್ನು ನಾನು ಯಾವತ್ತೂ ಉಪಯೋಗಿಸಿಲ್ಲ. ತೆಗೆದೆಸೆದು ಬಿಡೋಣ ಎಂದು ನನಗೆ ಕೆಲವು ಸಲ ಅನಿಸಿತ್ತು. ಬೇಡ ಎಂದು ಬಂದ್ ಮಾಡಿ ಇರಿಸಿಕೊಂಡೆ. ಈಗಲೂ ನನಗೆ ಅದರ ಅಗತ್ಯವಿಲ್ಲ. ಒಂದೇ ಒಂದು ಕೆಲಸಕ್ಕೆ ಬೇಕು ಅಂತ ಇಟ್ಟುಕೊಂಡಿದ್ದೇನೆ, ಮುರಾರಿಯನ್ನು ಸಂಪರ್ಕಿಸಲು. ಆದರೆ ಈಗಲೇ ಅಲ್ಲ. ನಿನ್ನನ್ನು ಕಾಣಬೇಕೆಂದು ನಾನು ಆನೆಮಹಲಿನಿಂದ ಹೊರಡುವಾಗ, ನಿನ್ನ ಬಳಿ ದೂರ ಸಂಪರ್ಕದ ಏಕ ಸಾಧನವಾಗಿದ್ದ ಲ್ಯಾಂಡ್‌ಲೈನಿನ ಸಂಪರ್ಕವನ್ನು ಕಡಿದು, ರಿಸೀವರನ್ನು ಕಪಾಟಿನಲ್ಲಿಟ್ಟು ಬೀಗ ಹಾಕಿದ್ದೇನೆ. ಅಮರೇಶ ಮತ್ತು ಸನ್ಮತಿಯ ಕೈಗೆ ಸಿಗಬಾರದೆಂದು ಹಾಗೆ ಮಾಡಿದ್ದು. ಬಹುಶಃ ನೀನು ಕೂಡ ಅದನ್ನು ಉಪಯೋಗಿಸುತ್ತಿರಲಿಲ್ಲ. ಇರಲಿ. ಸದ್ಯ ಆ ವಿಚಾರಗಳೆಲ್ಲ ಬೇಡ.

ಸಂಕ್ಷಿಪ್ತವಾಗಿ ಮುಖ್ಯವಾದದ್ದನ್ನ ಮಾತ್ರ ಹೇಳ್ತೇನೆ, 'ಸುಕೃತಿ ಮತ್ತು ಕರುಣಾನಿಧಿ ಡೈವೋರ್ಸ್ ಆಗಿದ್ದಾರೆ. ಕರುಣಾನಿಧಿ ಚೆನ್ನೈಯಲ್ಲಿ ಏನೋ ವ್ಯಾಪಾರ ಮಾಡಿಕೊಂಡು, ಸಾಕಷ್ಟು ಕುಡಿಯುತ್ತಾ ಇರುತ್ತಾನೆ. ಸುಕೃತಿಗೆ ಇಬ್ಬರು ಮಕ್ಕಳಿದ್ದಾರೆ. ಹಿರಿಯ ಮಗಳು ಶಮಿಗೆ ಈಗ ಎಂಟು ವರ್ಷವಾಗಿರಬಹುದು, ಕಿರಿಯ ಮಗಳು ಕಾಂತಿಗೆ ಐದೋ ಆರೋ ಆಗಿರಬಹುದು. ಸುಕೃತಿ ಅಮೆರಿಕದಲ್ಲಿ ಇದ್ದಾಳೆ. ಮಕ್ಕಳು ಸುಕೃತಿಯ ಜೊತೆ ಇದ್ದಾರೆ. ಮಕ್ಕಳನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾಳೆ ಅಂತ ಗೊತ್ತಿಲ್ಲ. ಮಕ್ಕಳು ಅಮ್ಮನಂಥ ಗುಣವಂತೆಯರು ಆಗದಿದ್ದರೆ ಒಳ್ಳೆಯದು ಎಂದುಕೊಳ್ಳುತ್ತೇನೆ. ಸುಕೃತಿಗೆ ಒಳ್ಳೆಯ ಸಂಬಳ ಬರುತ್ತದೆ. ಕೆಲಸದಲ್ಲಿ ತುಂಬಾ ಜಾಣೆ. ಕಂಪೆನಿಗೆ ಅವಳನ್ನು ಬಿಡಲು ಇಷ್ಟವಿಲ್ಲ. ಆದ್ದರಿಂದ ಸಂಬಳ ಏರಿಸುತ್ತಾ ಇರುತ್ತಾರೆ. ಕೇವಲ ಸಂಬಳವೆಂಬ ಸಂಪಾದನೆಗಾಗಿ ಸುಕೃತಿ ಅಮೆರಿಕೆಯಲ್ಲಿ ಒಂಟಿಯಾಗಿ ಇದ್ದಾಳೆ. ಅವಳ ಬಳಿ ಈಗ ಕೆಲವು ಕೋಟಿ ಹಣ ಇರಬಹುದು. ಅದು ಯಾಕೆ ಎಂದು ಅವಳಿಗೇ ಗೊತ್ತಿಲ್ಲ. ಹೆಚ್ಚೆಂದರೆ, ಅವಳು ಒಂದು ದೊಡ್ಡ ಮಹಡಿ ಮನೆ ಕಟ್ಟಿಸಿಯಾಳು. ಅದು ಸಹ ಯಾಕೆ ಎಂದು ಅವಳಿಗೆ ಗೊತ್ತಿರಲಿಕ್ಕಿಲ್ಲ. ಏನೇ ಇರಲಿ, ಅವಳು ಒಮ್ಮೆ ನಾವಿರುವಲ್ಲಿಗೆ ಬರಲಿ. ಬರುವ ಹಾಗೆ ನಾನು ಮಾಡುತ್ತೇನೆ' ಎಂದು ಅಭಿ ಸ್ವಲ್ಪ ಹೊತ್ತು ಎತ್ತಲೋ ನೋಡುತ್ತಾ ಸುಮ್ಮನಿದ್ದ. ಅನಂತರ ಹೇಳಿದ, 'ಇಷ್ಟು ಹೊತ್ತು ನಾನೇ ಮಾತಾಡುತ್ತಿದ್ದೆ. ನೀನು ಒಂದಕ್ಷರವನ್ನೂ ನುಡಿಯಲಿಲ್ಲ. ನನಗೆ ನುಡಿ ಸದ್ಯಕ್ಕೆ ಬೇಡ; ಬೇಕಾದ್ದು ನಡೆ ಮಾತ್ರ. ಕೆಲಕಾಲ ನೀನು ಈ ರೀತಿ ಮೌನವಾಗಿದ್ದರೆ ನನಗೂ ಸಂತೋಷವೇ' ಎಂದು ನಕ್ಕ. ಅಭಿ ಕಾಶಿಯಲ್ಲಿ ಅಪ್ಪನನ್ನು ಭೇಟಿಯಾದ ನಂತರ ಮೊಟ್ಟಮೊದಲ ಬಾರಿಗೆ ನರಹರಿಯ ಮುಖದಲ್ಲಿ ಪ್ರಸನ್ನತೆ ಕಾಣಿಸಿತು.

ಮಂಗಳೂರಿನಲ್ಲಿ ರೈಲಿನಿಂದ ಇಳಿಯುವಾಗ ಅಭಿ ಹೇಳಿದ, 'ಮನೆಯ ಸ್ಥಿತಿ ಹೇಗಿದೆ ಎಂದು ಊಹಿಸಲು ಸಾಧ್ಯವಿಲ್ಲ. ಗೊತ್ತಿಲ್ಲ. ನಿನಗಂಟಿದ ಪಾಪಿಗಳು ಮನೆಯಲ್ಲಿದ್ದರೆ ಅವರ ಪ್ರತಿಕ್ರಿಯೆ ಏನಿರಬಹುದು ಎಂದು ಊಹಿಸಲು ಕೂಡ ಆಗುವುದಿಲ್ಲ. ನಾವು ಮನೆಯನ್ನೊಮ್ಮೆ ನೋಡಿಬಂದು ಹೋಟೆಲ್ ರೂಮಿನಲ್ಲಿ ವಾಸ ಮಾಡೋಣ' ಎಂದ ಅಭಿ. ನರಹರಿಯಿಂದ ಯಾವುದೇ ಪ್ರತಿಕ್ರಿಯೆಯಿಲ್ಲ.

ನರಹರಿ ಮತ್ತು ಅಭಿ ರೈಲಿನಲ್ಲಿ ಮಂಗಳೂರಿನಲ್ಲಿ ಹೋಟೆಲಿನಲ್ಲಿ ಊಟ ಮಾಡಿ ಬಸ್ಸಿನಲ್ಲಿ ಸಕಲೇಶಪುರಕ್ಕೆ ಬಂದು ಆಟೊದಲ್ಲಿ ಆನೆಮಹಲ್ ಮನೆಗೆ ಬಂದರು.

ಮನೆಯ ಎದುರಿನ ಬಾಗಿಲಿನಲ್ಲಿ ಬೀಗ ನೇತಾಡುವುದು ಕಾಣಿಸಿತು. ಬಾಗಿಲ ಮೇಲೆ ಒಂದು ಫಲಕ ತೂಗಾಡುತ್ತಿತ್ತು. ಅದರ ಮೇಲೆ ಏನೋ ಬರಹ ಕಾಣಿಸಿ ಅಭಿ ಹತ್ತಿರ ಹೋಗಿ ನೋಡಿದ. ಮನೆ ಮತ್ತು ಜಾಗ ಮಾರಾಟಕ್ಕಿದೆ ಜಾಗದ ವಿಸ್ತೀರ್ಣ ಒಂದೂಕಾಲು ಎಕರೆ ಎಂದಿತ್ತು.

ಮನೆಯ ಕೆಲಸ ಮಾಡುತ್ತಿದ್ದವರ ಪೈಕಿ ಒಬ್ಬನಾಗಿದ್ದ ಶಂಕರ ಎಂಬ ಆಳು ಬಂದು, 'ಅಣ್ಣಾವ್ರೆ, ಯಾವಾಗ ಬಂದ್ರಿ. ಈಗಷ್ಟೇ ಬಂದಿರಾ?' ಎಂದು ಕೇಳಿದ.

ಹೌದು, ಈಗಷ್ಟೇ ಬಂದ್ವಿ. ಇಲ್ಲಿದ್ದ ನಮ್ಮವರು ಎಲ್ಲಿದ್ದಾರೆ ಅಂತ ಗೊತ್ತಿದ್ಯಾ?

'ಇಲ್ಲ. ಅಣ್ಣಾವ್ರೆ, ಅವ್ರು ಮನೆಗೆ ಬೀಗ ಕೂಡ ಹಾಕದೆ ಹೋದ್ರು. ಮೂರು ತಿಂಗಳಾಯ್ತು. ಒಂದು ಹಳೆಯ ಬೀಗ ತಂದು ನಾನೇ ಹಾಕಿದೆ. ಬೀಗದ ಕೈ

## ಸಂತ ಬಂದ

ತಾಯಿಯೆಂದಳು ಮಗಳೆ
ಸಂತರು ಬಂದಿದ್ದಾರೆ
ಹೋಗಿ ಆಶೀರ್ವಾದ ಪಡೆ
ಮಗಳು ಹೆದರಿ ಕಂಗಾಲಾದಳು !

★ **ಕಾಸರಗೋಡು ಅಶೋಕ್ ಕುಮಾರ್**



ಈಶ್ವರ